# ಶುದ್ಧೀಕರಿಸುವ ಬೆಂಕಿ



ಅಜೀಜ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ  ಮತ್ತು ಹಂಚಿಕೆ : **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಜುಲೈ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬೈಫೈಯ್ತ್ ಡಿಸೈನ್ಸ್

Contact Information:
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - The Refiner's Fire)

# ಶುದ್ಧೀಕರಿಸುವ ಬೆಂಕಿ

ಆಶೀಷ್ ರಾಯ್‌ಚೂರ್

# ಪರಿವಿಡಿ


| | | |
|---|---|---|
| 1. | ಶುದ್ಧೀಕರಿಸುವಾತನು ಕಾರ್ಯ ನಿರತನಾಗಿದ್ದಾನೆ | 1 |
| 2. | ಶುದ್ಧೀಕರಣಕ್ಕಾಗಿ ಬೆಂಕಿ | 4 |
| 3. | ಪರೀಕ್ಷಿಸಲು ಬೆಂಕಿ | 6 |
| 4. | ಬೆಂಕಿಯು ಏನಾಗಿದೆ | 8 |
| 5. | ಪ್ರತಿಯೊಬ್ಬರು ಬೆಂಕಿಯೊಡನೆ ಉಪ್ಪಿನ ಹದ ಹೊಂದಿದ್ದಾರೆ | 14 |
| 6. | ಬೆಂಕಿಯ ಮೂಲಕವಾಗಿ ನಾವು ನಡೆಯುವಾಗ | 16 |
| 7. | ಇದರೆಲ್ಲದರ ಮೌಲ್ಯ | 18 |

# 1

# ಶುದ್ಧೀಕರಿಸುವಾತನು ಕಾರ್ಯ ನಿರತನಾಗಿದ್ದಾನೆ

ಜೆಕರ್ಯ 13:9
**ಆ ಮೂರನೆಯ ಭಾಗದವರನ್ನು ನಾನು ಬೆಂಕಿಗೆ ಹಾಕಿ ಬೆಳ್ಳಿಯಂತೆ ಶೋಧಿಸುವೆನು ಬಂಗಾರದ ಹಾಗೆ ಶುದ್ಧಿ ಮಾಡುವೆನು. ಅವರು ನನ್ನ ಹೆಸರೆತ್ತಿ ಪ್ರಾರ್ಥಿಸುವರು ನಾನು ಆಲಿಸುವೆನು; ನಾನು ಇವರು ನನ್ನ ಜನರು ಅಂದುಕೊಳ್ಳುವೆನು ಅವರು ನಮ್ಮ ದೇವರಾದ ಯೆಹೋವನೇ ಅನ್ನುವರು.**

ಕೀರ್ತನೆಗಳು 66:10–12
**ದೇವರೇ, ನಮ್ಮನ್ನು ಶೋಧಿಸಿದ ಬೆಳ್ಳಿಯನ್ನು ಪುಟಕ್ಕೆ ಹಾಕುವ ಮೇರೆಗೆ ಶುದ್ಧಿ ಮಾಡಿದಿ. ನಮ್ಮನ್ನು ಬಲೆಯಲ್ಲಿ ಸಿಕ್ಕಿಸಿದಿ. ನಮ್ಮ ಸೊಂಟಕ್ಕೆ ಭಾರವಾದ ಕೊರಡನ್ನು ಕಟ್ಟಿದಿ. ಮನುಷ್ಯರು ನಮ್ಮ ತಲೆಗಳ ಮೇಲೆಯೇ ತಮ್ಮ ರಥಗಳನ್ನು ಹಾಯಿಸುವಂತೆ ಮಾಡಿದಿ ನಾವು ಬೆಂಕಿಯನ್ನು ನೀರನ್ನು ದಾಟಬೇಕಾಯಿತು ಆದರೂ ಸುಸ್ಥಿತಿಗೆ ನಮ್ಮನ್ನು ಪಾರು ಗಾಣಿಸಿದ್ದೀ.**

ಶುದ್ಧೀಕರಿಸುವಿಕೆ ಮಾಡುವಾತನಿಗೆ (ಚಿನ್ನ ಅಥವಾ ಬೆಳ್ಳಿಯ ಅಕ್ಕಸಾಲಿಗನಿಗೆ) ಶುದ್ಧವಾದ ಲೋಹವನ್ನು ಅದರ ಮಿಶ್ರಲೋಹದಿಂದ ಬೇರ್ಪಡಿಸುವುದು ಗೊತ್ತಿರುವಂತಹವನಾಗಿರುತ್ತಾನೆ. ಅವನು ಅದಿರನ್ನು ಶುದ್ಧೀಕರಿಸುವ ಮಡಿಕೆ ಅಥವಾ ಕುಲುಮೆಯಲ್ಲಿ ಕರಗಿಸುತ್ತಾನೆ. ಅದಿರು ತೆಗೆಯುವಾಗ ಪ್ರಮುಖವಾದಂತಹದರಿಂದ ಸುಟ್ಟು ಹಾಕಲ್ಪಡುತ್ತದೆ. ಒಂದು ಸಾರಿ ಕಳಪೆಯಾದದು(ಅಶುದ್ಧವಾದವುಗಳು) ತೆಗೆದು ಹಾಕಲ್ಪಟ್ಟಾಗ, ಉಪಯುಕ್ತವಾದ ಮತ್ತು ಆಭರಣಗಳ ವಸ್ತುಗಳಾಗಿ ಆಕಾರಕೊಡಬಹುದಾಗಿದೆ. ಈ ಒಂದು ಪ್ರಕ್ರಿಯೆ ವಿಧಾನವು ಸುತ್ತಿಗೆಯಿಂದ ಹೊಡೆಯುವುದು, ಅಚ್ಚೊತ್ತುವಿಕೆ, ಲೋಹಲೇಪ, ಮೇಲ್ಪದರಗಳು ಮುಂತಾದವುಗಳನ್ನು ಒಳಗೊಳ್ಳುತ್ತದೆ. ಅದಿರನ್ನು ಶುದ್ಧೀಕರಿಸಲು ಬೆಂಕಿಯ ಅಗತ್ಯವಾಗಿದೆ.

ಆತನ ಜನರನ್ನು ಶುದ್ಧೀಕರಿಸುವಂತಹ ಶುದ್ಧೀಕರಣಗಾರನು ದೇವರಾಗಿದ್ದಾನೆ ಎಂಬುದಾಗಿ ಸತ್ಯವೇದವು ಬೋಧಿಸುತ್ತದೆ. ''ಬೆಳ್ಳಿಯನ್ನು ಶೋಧಿಸುವ ಅಕ್ಕ ಸಾಲಿಗನಂತೆ ಕುಳಿತು ಲೇವಿ ವಂಶದವರನ್ನು ಶೋಧಿಸಿ ಬೆಳ್ಳಿ ಬಂಗಾರಗಳನ್ನೋ ಎಂಬಂತೆ ಶುದ್ಧೀಕರಿಸುವನು ಅವರು ಸದ್ಧರ್ಮಿಗಳಾಗಿ ಯೆಹೋವನಿಗೆ

ನೈವೇದ್ಯಗಳನ್ನು ತಂದೊಪ್ಪಿಸುವರು'' (ಮಲಾಕಿಯ 3:3) ಈ ವಚನ ಭಾಗವು ಆತನ ಜನರ ಮಧ್ಯದಲ್ಲಿ ದೇವರು ಮಾಡುವಂತಹ ಭವಿಷ್ಯತ್ತಿನ ಕಾರ್ಯಗಳ ಕುರಿತು ವ್ಯಾಖ್ಯಾನಿಸಿದ್ದಾಗಲೂ, ಆತನ ಜನರನ್ನು ದೇವರು ಈ ಒಂದು ದಿನ ಮತ್ತು ಗಂಟೆಯಲ್ಲಿಯೂ ಸಹ ಶುದ್ಧೀಕರಿಸಲು ಬಯಸುತ್ತಾನೆ ಎಂಬುದನ್ನು ವಾಕ್ಯಗಳಿಂದ ನಾವು ಅರ್ಥ ಮಾಡಿಕೊಳ್ಳುತ್ತೇವೆ. ಸಂಸ್ಕರಣ ಪ್ರಕ್ರಿಯೆಗೆ ಬೆಂಕಿಯ ಉಪಯೋಗವು ಅಗತ್ಯವಾಗಿದೆ. ಬೆಂಕಿಯು ಲೋಹದ ಸ್ವಭಾವದ ಪರೀಕ್ಷೆ ಮತ್ತು ಶುದ್ಧೀಕರಿಸುವಿಕೆಗಾಗಿ ಉಪಯೋಗಿಸಲ್ಪಡುತ್ತದೆ. ಶುದ್ಧೀಕರಿಸುವ ಪ್ರಕ್ರಿಯೆಯಲ್ಲಿ ಆತನ ಜನರನ್ನು ಆತನು ಕಳುಹಿಸುವ ಮೂಲಕವಾಗಿ ದೇವರು ಬೆಂಕಿಯನ್ನು ನೇಮಿಸುತ್ತಾನೆ. ಸ್ನಾನಿಕನಾದ ಯೋಹಾನನು ಯೇಸುವನ್ನು ಪರಿಚಯಿಸುವಾಗ ಜನರನ್ನು ಪವಿತ್ರಾತ್ಮನೊಡನೆ ಮತ್ತು ಬೆಂಕಿಯೊಡನೆ ದೀಕ್ಷಾಸ್ನಾನ ಮಾಡಿಸಲು ಯೇಸುವು ಬಂದನು ಎಂಬುದಾಗಿ ಅವನು ಹೇಳಿದನು ''ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು'' (ಮತ್ತಾಯ 3:11)

'ಶುದ್ಧೀಕರಿಸು' ಎಂಬ ಪದಕ್ಕೆ ಇಬ್ರಿಯಾ ಭಾಷೆಯಲ್ಲಿ 'ಟಸರಫ್' (Tsaraph) ಎಂಬುದಾಗಿದೆ ಇದರ ಅರ್ಥವು ''ಕರಗಿಸು'' 'ಸಂಸ್ಕರಣ' 'ಶುದ್ಧೀಕರಿಸು' 'ಬೆಂಕಿಯಿಂದ ಪ್ರಯತ್ನಿಸು' 'ಪರೀಕ್ಷಿಸು' ಮತ್ತು 'ಪರಿಶೀಲಿಸು' ಎಂಬುದಾಗಿದೆ. ಈ ಕ್ರಿಯಾಪದವು ಅಮೂಲ್ಯವಾದ ಲೋಹಗಳಿಂದ ಅಶುದ್ಧತೆಯನ್ನು ತೆಗೆಯುವಂತಹ ಕರಗಿಸುವಿಕೆಯ ಪ್ರಕ್ರಿಯೆಯನ್ನು ವ್ಯಾಖ್ಯಾನಿಸಲು ಉಪಯೋಗಿಸಲ್ಪಟ್ಟಿದೆ. ಆತನ ಜನರನ್ನು ಶುದ್ದೀಕರಿಸಲು ದೇವರು ಯಾವ ಬೆಂಕಿಯನ್ನು ಉಪಯೋಗಿಸುತ್ತಾನೆಂಬುದುನ್ನು ಕಲಿಯಲು ವಚನ ಭಾಗಗಳನ್ನು ನಾವು ಪರೀಕ್ಷಿಸೋಣ. ಹೃದಯಗಳಲ್ಲಿ ದೇವರು ಯಾವ ಮಾರ್ಗಗಳಲ್ಲಿ ಕಾರ್ಯ ಮಾಡುತ್ತಾನೆಂಬುದನ್ನು ಮತ್ತು ಆತನಿಗೆ ತಮ್ಮನ್ನು ಕೊಡಲ್ಪಟ್ಟಂತವರಲ್ಲಿ ಜೀವಿಸುತ್ತಾನೆ ಎಂಬುದನ್ನು ಕಲಿಯುವಂತದ್ದು ಉತ್ಸಾಹಕರವಾಗಿದೆ. ದೇವರು ಕಾರ್ಯಗಳನ್ನು ಮತ್ತು ಆತನ ಜನರೊಡನೆ ವ್ಯವಹರಿಸುವ ವಿಧಾನಗಳು ಮತ್ತು ಮಾರ್ಗಗಳು ಕುರಿತು ಅಧಿಕವಾಗಿ ತಿಳಿದುಕೊಳ್ಳುವುದು. ಆತನೊಡನೆ ಹೆಜ್ಜೆಯನ್ನಿಟ್ಟು ನಡೆಯುವುದು ಮತ್ತು ಸಮರ್ಪಿಸುವುದು ಬಹಳ ಸುಲಭಕರವಾಗಿರುತ್ತದೆ. ಆತನು ಕಾರ್ಯ ಮಾಡುವ ವಿಧಾನಗಳಿಗೆ ನಾವು ಅಜ್ಞಾನಿಗಳಾಗಿ ನಾವು ಮೊಂಡುಗಳಾದರೆ ಮತ್ತು ನಮ್ಮ ಸ್ವಂತ ಮಾರ್ಗ ಹೊಂದಲು ಅಪೇಕ್ಷಿಸಿದರೆ, ಮಾತ್ರ ಇದು ಅನ್ವಯಿಸುತ್ತದೆ. ಆತನ

ಜನರನ್ನು ಶುದ್ಧೀಕರಿಸುತ್ತಾನೆ ಮತ್ತು ಶುದ್ಧೀಕರಿಸುವವನಾಗಿ ನಮ್ಮ ದೇವರು ನಮಗೆ ಕೃಪೆಯನ್ನು ಕೊಡುತ್ತಾನೆ. ಕಲೆಗಳು ಅಥವಾ ಸುಕ್ಕುಗಳು ಇಲ್ಲದಂತಹ ಸಭೆಗಾಗಿ ಯೇಸುವು ಬರುತ್ತಾನೆ. ಇದು ಅಗತ್ಯಕರವಾಗಿ ಶುದ್ಧೀಕರಣದ ಪ್ರಕ್ರಿಯೆಯನ್ನು ಅಪೇಕ್ಷಿಸುತ್ತದೆ. ಈ ಪುಸ್ತಕವು ದೇವರ ಉದ್ದೇಶಗಳು ಮತ್ತು ಮಾರ್ಗಗಳ ಕುರಿತು ನಮ್ಮನ್ನು  ಜ್ಞಾನವಂತರಾಗಿ ಮಾಡುತ್ತದೆ.

# 2

# ಶುದ್ಧೀಕರಣಕ್ಕಾಗಿ ಬೆಂಕಿ

ಕೀರ್ತನೆಗಳು 51:6
**ಯಥಾರ್ಥ ಚಿತ್ತವೇ ನಿನಗೆ ಸಂತೋಷ ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು.**

ಬೆಂಕಿಯು ಶುದ್ಧೀಕರಣದ ಚಿಹ್ನೆಯಾಗಿದೆ. ಇದು ಶುದ್ಧತೆ ಮತ್ತು ಸ್ವಚ್ಛತೆಯನ್ನು ನಿರ್ವಹಿಸುತ್ತದೆ. ಇಸ್ರಾಯೇಲ್ ಜನರು ಯುದ್ಧಕ್ಕೆ ಹೋದಾಗ ಮತ್ತು ಅವರ ಉಡುಗೊರೆಗಳನ್ನು ಹಿಂತಿರುಗಿ ತಂದಾಗ ಎಲ್ಲವೂ ಬೆಂಕಿಯಲ್ಲಿ ನಿಲ್ಲಬೇಕು ಮತ್ತು ಅವುಗಳು ಬೆಂಕಿಯನ್ನು ಹಾದುಹೋಗಬೇಕೆಂಬುದಾಗಿ ದೇವರು ಉಪದೇಶಿಸಿದನು. ''ಬೆಂಕಿಯನ್ನು ತಡೆಯುವವುಗಳನ್ನು ಬೆಂಕಿದಾಟಿಸಿ ಶುದ್ಧ ಮಾಡಬೇಕು'' (ಅರಣ್ಯಕಾಂಡ 31:23ಅ) ಎಂಬುದಾಗಿ ಆತನು ಹೇಳಿದನು. ಆದುದರಿಂದ ಬೆಂಕಿಯನ್ನು ದಾಟಿಸುವಂತದ್ದೆಲ್ಲವನ್ನು ಶುದ್ಧೀಕರಿಸುವ ಪರಿಣಾಮ ಬೆಂಕಿಯು ಹೊಂದಿದೆ.

ಆಂತರಿಕ ಭಾಗಗಳಲ್ಲಿ ನಮ್ಮ ಅಂತರ್ಯ ಮನುಷ್ಯನಲ್ಲಿ ಸತ್ಯವನ್ನು ನೋಡಲೂ ದೇವರು ಅಪೇಕ್ಷಿಸುತ್ತಾನೆ ಎಂಬುದಾಗಿ ಸತ್ಯವೇದವು ನಮಗೆ ಬೋಧಿಸುತ್ತದೆ. ''ಸತ್ಯ'' ಎಂಬುದರ ಇಬ್ರಿಯ ಭಾಷೆಯ ಅರ್ಥವು 'ನಿಚ್ಚಿತತೆಯ' 'ಸ್ಥಿರತೆ' ಮತ್ತು 'ವಿಶ್ವಾಸಾರ್ಹ' ಎಂಬುದಾಗಿದೆ. ಇದು ನಂಬಬಹುದಾದ, ದೃಢತೆಯ ಮತ್ತು ವಿಶ್ವಾಸಾರ್ಹತೆಯ ಒಂದು ಪ್ರಜ್ಞೆಯನ್ನು ರವಾನಿಸುತ್ತದೆ. ಸತ್ಯವುಳ್ಳ ಜನರು, ದೇವರ ರಾಜ್ಯದ ನಿತ್ಯತ್ವದ ಸಂಪತ್ತಿನೊಡನೆ ನಂಬಲರ್ಹವಾದ, ಈ ಇಂದಿನ ದಿನ ಮತ್ತು ಗಂಟೆಗಳಲ್ಲಿ ದೇವರಿಗಾಗಿ ನಿಂತುಕೊಳ್ಳುವುದಕ್ಕಾಗಿ ಅವಲಂಬಿಸಲ್ಪಡುವಂತ ಜನರು, ಇಂತಹ ಗುಣಮಟ್ಟವುಳ್ಳಂತಹ ಜನರನ್ನು ದೇವರು ಅಪೇಕ್ಷಿಸುತ್ತಾನೆ.

ದೇವರ ಜನರು ಪಾಪ ಮಾಡಿದಾಗ ಮತ್ತು ಮರುಭೂಮಿಯಲ್ಲಿ ಅಲೆದಾಡುವಾಗ ''ನಿನ್ನ ಮೇಲೆ ಕೈ ಮಾಡಿ ಪುಟ ಹಾಕಿ (ಟಸರಫ್, ಶುದ್ಧೀ) ನಿನ್ನ ಕಲ್ಮಷವನ್ನು ಸಂಪೂರ್ಣವಾಗಿ ಹೋಗಲಾಡಿಸಿದೆ. ನಿನ್ನ ಕಂದುಕಸರನ್ನೆಲ್ಲಾ ತೆಗೆದು ಬಿಡುವೆನು'' (ಯೆಶಾಯ 1:25) ಈ ಒಂದು ಸನ್ನಿವೇಶದಲ್ಲಿ ''ಕಸ''

ಮತ್ತು 'ಮಿಶ್ರಲೋಹ' ಸಾಂಕೇತಿಕವಾಗಿ ಪಾಪದ ಕುರಿತು ಮಾತಾಡುತ್ತದೆ. ತಿರುಗಿ ಮತ್ತೊಮ್ಮೆ, ದೇವರು ಶುದ್ಧೀಕರಿಸುವಾತನ ಸಂಕೇತವನ್ನು ಉಪಯೋಗಿಸಿದನು ಮತ್ತು ಆತನ ಜನರ ಮಧ್ಯದಲ್ಲಿ ಆತನು ತರಲು ಬಯಸುವಂತಹ ಶುದ್ಧೀಕರಣದ ಆತನ ಕಾರ್ಯವನ್ನು ವ್ಯಾಖ್ಯಾನಿಸುತ್ತದೆ. ಯೆರೆಮೀಯದಲ್ಲಿ ಇದೇ ರೀತಿಯ ವ್ಯಾಖ್ಯಾನವನ್ನು ನಾವು ನೋಡುತ್ತೇವೆ. ''ನಿಮ್ಮ ನಿವಾಸವು ಮೋಸದೊಳಗೇ ಇದೆ ಅಯ್ಯೋ ಮೋಸಗಾರರಾಗಿರುವುದರಿಂದ ನನ್ನನ್ನು ಅರಿಯಲೊಲ್ಲರು ಎಂದು ಯೆಹೋವನು ಅನ್ನುತ್ತಾನೆ, ಹೀಗಿರಲು ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ ಆಹಾ, ನಾನು ನನ್ನ ಜನರ ದ್ರೋಹಕ್ಕೆ ಏನು ಮಾಡಲಿ? ಅವರನ್ನು ಪುಟಕ್ಕೆ ಹಾಕಿ ಶೋಧಿಸುವೆನು'' (ಯೆರೆಮೀಯ 9:6, 7). ಆತನ ಜನರನ್ನು ಬೆಂಕಿಯ ಮೂಲಕವಾಗಿ ದೇವರು ತರುತ್ತಾನೆ. ಆದ್ದರಿಂದ ಆತನು ಅವರನ್ನು ಶುದ್ಧೀಕರಿಸುತ್ತಾನೆ ಮತ್ತು ಆಂತರ್ಯ ಮನುಷ್ಯನು ಸತ್ಯವಾಗಿರುವಂತಹ ಜನರನ್ನಾಗಿ ಅವರನ್ನು ಮಾಡುತ್ತಾನೆ. ಕೀರ್ತನೆಗಾರನು ''ನನ್ನಲ್ಲಿ ಶುದ್ಧ ಹೃದಯವನ್ನು ಸೃಷ್ಟಿಸು'' ಎಂಬುದಾಗಿ ಪ್ರಾರ್ಥಿಸಿದನು ದೇವರು ನಮ್ಮನ್ನು ಶುದ್ಧೀಕರಿಸಲು ಮತ್ತು ಸತ್ಯದ ಜನರನ್ನಾಗಿ ಮಾಡಲೂ ದೇವರಿಗೆ ನಾವು ಅವಕಾಶ ಮಾಡಿಕೊಡುವಾಗ ಇದು ಸಹ ನಮ್ಮ ಪ್ರಾರ್ಥನೆಯಾಗಿರಬೇಕು. ಕೊನೆಯ ಸಮಯಗಳ ಕುರಿತು ದಾನಿಯೇಲನಿಗೆ ದೇವದೂತನು ಹೇಳಿದ್ದನ್ನು ಓದುವಂತದ್ದು ಅತ್ಯದ್ಭುತಕರವಾಗಿದೆ. ''ಅನೇಕರು ತಮ್ಮನ್ನು ಶುದ್ಧೀಕರಿಸಿ ಶುಭ್ರ ಮಾಡಿಕೊಂಡು ಶೋಧಿತರಾಗುವರು'' (ದಾನಿಯೇಲನು 12:10ಅ)

ಶುದ್ಧೀಕರಿಸಲ್ಪಟ್ಟಂತಹ ''ಅನೇಕರು'' ಶುದ್ಧೀಕರಣಗೊಂಡವರು ಮತ್ತು ಶುಭ್ರಮಾಡಿಕೊಂಡವರು ಭಾಗವಾಗಿರಲೂ ನಾನು ಬಯಸುತ್ತೇನೆ. ನೀವು ಸಹ ಅದನ್ನು ಮಾಡುತ್ತಿರೆಂದು ನಾನು ನಂಬುತ್ತೇನೆ.

# 3

# ಪರೀಕ್ಷಿಸಲು ಬೆಂಕಿ

ಕೀರ್ತನೆಗಳು 7:9
**ಮನುಷ್ಯರ ಹೃದಯವನ್ನೂ ಅಂತರಿಂದ್ರಿಯವನ್ನೂ ಪರಿಶೋಧಿಸುವ ನೀತಿ ಸ್ವರೂಪನಾದ ದೇವರೇ**

ಗುಣನಡತೆಯನ್ನು ಪರೀಕ್ಷಿಸಲು ಬೆಂಕಿಯು ಸಹ ಒಂದು ಚಿಹ್ನೆಯಾಗಿದೆ. ವಿಶ್ವಾಸಿಗಳಿಗಾಗಿರುವ ನ್ಯಾಯತೀರ್ಪಿನ ಕುರಿತು ಮಾತನಾಡುವುದರಲ್ಲಿ, ಪ್ರತಿಯೊಬ್ಬರ ಕೆಲಸವನ್ನು, ಅದು ಎಂಥದೋ ಎಂಬುದಾಗಿ ಬೇರೆ ಮಾಡಿ ಬೆಂಕಿಯು ಶೋಧಿಸುತ್ತದೆ ಎಂಬುದಾಗಿ ಸತ್ಯವೇದವು (1 ಕೊರಿಂಥದವರಿಗೆ 3:13) ವ್ಯಾಖ್ಯಾನಿಸುತ್ತದೆ. ಬೆಂಕಿಯು ಗುಣನಡತೆ ಮತ್ತು ನಿಜವಾದ ಸ್ವಭಾವದ ಸಾರಾಂಶವನ್ನು ನಿಶ್ಚಯಿಸುತ್ತದೆ. ನಾವು ನಿಜವಾಗಿ ಯಾವ ಬಗೆಯ ಜನರು ಆಗಿದ್ದೇವೆ–ನಮ್ಮ ಹೃದಯದಲ್ಲಿ ಸತ್ಯವಾಗಿ ಏನಿದೆ ಎಂಬುದನ್ನು ನೋಡಲೂ ದೇವರು ನಮ್ಮನ್ನು ಬೆಂಕಿಯ ಮೂಲಕ ಕೊಂಡ್ಯೊಯ್ಯುತ್ತಾನೆ. ಹೌದು. ನಮ್ಮ ಹೃದಯಗಳ ಬಯಕೆಗಳು ಮತ್ತು ಆಲೋಚನೆಗಳು ದೇವರಿಗೆ ಗೊತ್ತಿದೆ ಮತ್ತು ನಮ್ಮ ಹೃದಯದ ಗುಣಮಟ್ಟವನ್ನು ನಿಶ್ಚಯ ಪಡಿಸಲೂ ಶೋಧಿಸುವುದು ದೇವರಿಗೆ ಅನಗತ್ಯವಾಗಿ ಇದು ಕಾಣಿಸುತ್ತದೆ. ಆದಾಗ್ಯೂ ವಚನ ಭಾಗದಲ್ಲಿ ದೇವರು ಅದನ್ನು ಸಾಮಾನ್ಯವಾಗಿ ಮಾಡುತ್ತಾನೆ ಎಂಬುದಾಗಿ ನೋಡುತ್ತೇವೆ. ಶುದ್ಧೀಕರಿಸುವ ಬೆಂಕಿಯ ಮೇಲೆ ಆತನ ಜನರನ್ನು ಇರಿಸುವುದರಿಂದ ಅವರ ಹೃದಯಗಳನ್ನು ಪರೀಕ್ಷಿಸುತ್ತಾನೆ'' (ಕೀರ್ತನೆಗಳು 11:5ಅ) ಲೋಹಗಳನ್ನು ಕುಲುಮೆಯಲ್ಲಿ ಹಾಕಿ ಶುದ್ಧೀಕರಿಸುವಂತೆ ದೇವರು ಆತನ ಜನರ ಹೃದಯಗಳನ್ನು ಪರೀಕ್ಷಿಸುತ್ತಾನೆ. ''ಬೆಳ್ಳಿ ಬಂಗಾರಗಳನ್ನು ಪುಟಕುಲಿಮೆಗಳು ಶೋಧಿಸುವವು, ಹೃದಯಗಳನ್ನು ಶೋಧಿಸುವವನು ಯೆಹೋವನೇ.'' (ಜ್ಞಾನೋಕ್ತಿಗಳು 17:3)

''ನನ್ನ ದೇವರೇ ನೀನು ಹೃದಯವನ್ನು ಶೋಧಿಸುವವನೂ ಯಥಾರ್ಥ ಚಿತ್ತರನ್ನು ಮೆಚ್ಚುವವನೂ ಆಗಿದ್ದೀ ಎಂಬುದನ್ನು ಬಲ್ಲೆನು.'' (1 ಪೂರ್ವಕಾಲ ವೃತ್ತಾಂತ 29:17ಅ) ದಾವೀದನು ತನ್ನ ಪ್ರಾರ್ಥನೆಯಲ್ಲಿ ಇದನ್ನು ಘೋಷಿಸುತ್ತಾನೆ. ಶೋಧಿಸು ಎಂಬುದಕ್ಕೆ ಇಬ್ರಿಯ ಭಾಷೆಯಲ್ಲಿ ''ನಷಾ'' (Nasah) ಮತ್ತು ಇದು ಪ್ರಯತ್ನಿಸು,

ಪ್ರಮಾಣೀಕರಿಸು ಮತ್ತು ಆಕರ್ಷಿಸು ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ. ಇದು ಯಾರಾದರೊಬ್ಬರನ್ನು ಶೋಧಿಸಲು ಹಾಕಿ, ಆ ವ್ಯಕ್ತಿಯು ಹೇಗೆ ಪ್ರತಿಕ್ರಿಯೆ ತೋರಿಸುತ್ತಾನೆ ಎಂಬುದನ್ನು ನೋಡುವ ಸಾಮಾನ್ಯ ವಿಚಾರವನ್ನು ಇದು ಸಾಗಿಸುತ್ತದೆ.

ಹಳೇ ಒಡಂಬಡಿಕೆಯಲ್ಲಿ ಆತನ ಜನರನ್ನು ದೇವರು ಶೋಧಿಸಿದ ಮಾರ್ಗಗಳ ಕುರಿತು ಓದುವುದು ಬಹಳ ಆಸಕ್ತಿಕರವಾಗಿದೆ. ''ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಈ ನಾಲ್ವತ್ತು ವರುಷ ಅರಣ್ಯದಲ್ಲಿ ನಡಿಸಿದ್ದನ್ನೂ ನೀವು ತನ್ನ ಆಜ್ಞೆಗಳನ್ನು ಕೈ ಕೊಳ್ಳುವವರೋ ಅಲ್ಲವೋ ಎಂದು ತಿಳಿದುಕೊಳ್ಳುವುದಕ್ಕೆ ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ನಿಮ್ಮ ಮನೋಭಾವವನ್ನು ಪರೀಕ್ಷಿಸಿದ್ದನ್ನೂ ನೆನಪಿಗೆ ತಂದುಕೊಳ್ಳಿರಿ.'' (ಧರ್ಮೋಪದೇಶಕಾಂಡ 8:2,3) ಮರುಭೂಮಿ ಯಾತ್ರೆಯಲ್ಲಿ ಮೋಶೆಯು ಇಸ್ರಾಯೇಲ್ ಜನರಿಗೆ ಹೇಳಿದ್ದನ್ನು ನೋಡುತ್ತೇವೆ. ದಾವೀದ ಮತ್ತು ಯೆರೆಮಿಾಯ ಇಬ್ಬರು, ದೇವರು ಅವರ ಹೃದಯಗಳನ್ನು ಶೋಧಿಸಿದರ ಕುರಿತು ಮಾತಾಡುತ್ತಾರೆ. ''ನೀನು ನನ್ನ ಹೃದಯವನ್ನು ಪರೀಕ್ಷಿಸಿದರೂ ರಾತ್ರಿ ವೇಳೆ ವಿಚಾರಿಸಿದರೂ ನನ್ನನ್ನು ಪುಟಕ್ಕೆ ಹಾಕಿ ಶೋಧಿಸಿದರೂ ಯಾವ ದುರಾಲೋಚನೆಯಾದರೂ ನನ್ನಲ್ಲಿ ದೊರೆಯುವುದಿಲ್ಲ ನನ್ನ ಬಾಯಲ್ಲಿಯೂ ತಪ್ಪಿಲ್ಲ.'' (ಕೀರ್ತನೆಗಳು 17:3) ''ಯೆಹೋವನೇ ನೀನು ನನ್ನನ್ನು ತಿಳಿದಿದ್ದೀ, ನನ್ನನ್ನು ನೋಡುತ್ತಾ ನಿನ್ನೊಂದಿಗೆ ಅನ್ಯೋನ್ಯವಾಗಿರುವ ನನ್ನ ಹೃದಯವನ್ನು ಪರೀಕ್ಷಿಸುತ್ತೀ ಅವರನ್ನು ಕುರಿಗಳನ್ನೋ ಎಂಬಂತೆ ಕೊಲೆಗೆ ಎಳೆದು ವಧೆಯ ದಿನಕ್ಕೆ ಗೊತ್ತು ಮಾಡು (ಯೆರೆಮಿಾಯ 12:3) ''ಯೆಹೋವನೇ ನನ್ನನ್ನು ಪರೀಕ್ಷಿಸು, ಪರಿಶೀಲಿಸು; ನನ್ನ ಅಂತರಿಂದ್ರಿಯವನ್ನೂ ಹೃದಯವನ್ನೂ ಪರಿಶೋಧಿಸು'' (ಕೀರ್ತನೆಗಳು 26:2) ಎಂಬುದಾಗಿ ಕೀರ್ತನೆಗಾರನ್ನು ಪ್ರಾರ್ಥನೆ ಮಾಡಿದಂತೆ ನಾವು ಪ್ರಾರ್ಥಿಸಲೂ ಶಕ್ತರಾಗಿದ್ದೇವಾ.

# 4

# ಬೆಂಕಿಯು ಏನಾಗಿದೆ

ಮಲಾಕಿಯ 3:2
**''ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ ಅಗಸನ ಚೌಳಿಗೂ ಸಮಾನನಾಗಿದ್ದಾನೆ''**

ಆತನ ಜನರನ್ನು ಶುದ್ಧೀಕರಿಸಲು ದೇವರು ಉಪಯೋಗಿಸುವ ''ಬೆಂಕಿಯು'' ಏನಾಗಿದೆ? ದೇವರು ನಮ್ಮನ್ನು ಶುದ್ಧೀಕರಿಸುವ ಮತ್ತು ಶೋಧಿಸುವಂತಹ ''ಕುಲುಮೆ'' ''ಶುದ್ಧೀಕರಿಸುವ ಮಡಕೆ'' ಏನು? ದೇವರ ವಾಕ್ಯದ ಅಧ್ಯಯನದಿಂದ, ನಾವು ಸಾಧ್ಯಕರವಾದ ಮೂರು ಸಮಾರೋಪಕ್ಕೆ ಬರುತ್ತೇವೆ.

## ಬೆಂಕಿಯು ದೇವರ ಪ್ರಸನ್ನತೆಯಾಗಿದೆ

ನಿಮ್ಮ ದೇವರಾದ ಯೆಹೋವನು ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದೆ ಉರಿಯುುವ ಬೆಂಕಿಯಂತೆ (ದ್ರೋಹಿಗಳನ್ನು) ದಹಿಸಿ ಬಿಡುವವನಾಗಿದ್ದಾನೆಂದು ತಿಳಿಯಿರಿ. (ಧರ್ಮೋಪದೇಶಕಾಂಡ 4:24)

ಧರ್ಮೋಪದೇಶಕಾಂಡ 4:24 ಮತ್ತು ಇಬ್ರಿಯರಿಗೆ 12:29 ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ ಎಂಬುದಾಗಿ ನಮಗೆ ಹೇಳುತ್ತವೆ. ಹಳೇ ಒಡಂಬಡಿಕೆಯಲ್ಲಿನ ದೇವರ ಪ್ರಸನ್ನತೆಯ ಅನೇಕ ವ್ಯಾಖ್ಯಾನಗಳನ್ನು ಕಾಣುವ ಅಗ್ನಿಯ ತೋರ್ಪಡಿಸುವಿಕೆಯ ಸಂಪರ್ಕಗಳಾಗಿವೆ. ''ಯೆಹೋವನು ಬೆಂಕಿಯೊಳಗೆ ಸೀನಾಯಿ ಬೆಟ್ಟದ ಮೇಲಕ್ಕೆ ಇಳಿದು ಬಂದದರಿಂದ ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿಕೊಂಡಿತು.'' (ವಿಮೋಚನಕಾಂಡ 19:18) ''ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು (ವಿಮೋಚನಕಾಂಡ 24:17)

ನಾವು ದೇವರ ಪ್ರಸನ್ನತೆಗೆ ಪ್ರವೇಶಿಸುವಾಗ ನಾವು ದಹಿಸುವ ಅಗ್ನಿಯಾಗಿರುವಾತಾನ ಪ್ರಸನ್ನತೆಗೆ ಪ್ರವೇಶಿಸುವವರಾಗಿರುತ್ತೇವೆ. ಈ ಒಂದು

ಸನ್ನಿವೇಶದಲ್ಲಿ ''ದಹಿಸುವ'' ಎಂಬುದರ ಅರ್ಥವು ಆತನ ಪ್ರಸನ್ನತೆಯಲ್ಲಿ ಅಂಗೀಕರಿಸಲ್ಪಡದೇ ಇರುವಂತದ್ದು ಸುಟ್ಟು ಹಾಕಲ್ಪಡುತ್ತದೆ ನಾಶವಾಗುತ್ತದೆ. ನಾನು ಅನೇಕ ಕೂಟಗಳಲ್ಲಿದ್ದೇನು ಮತ್ತು ಪ್ರಾರ್ಥನೆಯ ಸಮಯದಲ್ಲಿ ಒಂದು ದಹಿಸುವ ಅಗ್ನಿಯಾಗಿರುವಂತಹ ದೇವರ ಪ್ರಸನ್ನತೆಯು ಬಹಳ ಪ್ರಬಲವಾಗಿರುತ್ತಿತ್ತು. ನಾವೆಲ್ಲರೂ ಮಾಡಿದ್ದೇನೆಂದರೆ, ಶಾಂತವಾಗಿ ಇದ್ದೇವು ಕೆಲವು ಸಮಯಗಳಲ್ಲಿ ಕಣ್ಣೀರು ನಮ್ಮ ಕೆನ್ನೆಯ ಮೇಲೆ ಹರಿಯುತ್ತಿತ್ತು. ನಮ್ಮ ಹೃದಯದಲ್ಲಿ ಶುದ್ಧೀಕರಣ, ಸ್ವಚ್ಚಗೊಳಿಸುವ, ಪರೀಕ್ಷಿಸುವ, ಶೋಧಿಸುವ ಕಾರ್ಯವನ್ನು ಆಳವಾಗಿ ದೇವರು ಮಾಡುತ್ತಿದ್ದಾನೆ ಎಂಬುದು ನಮಗೆ ಗೊತ್ತಿತ್ತು. ಓಹೋ! ಎಂದಿಗೂ ಹೆಚ್ಚಿಸಲ್ಪಟ್ಟಂತಹ ಆಳತೆಯುಳ್ಳದ್ದು ಈ ದಿನ ಹಾಗೆಯೇ ನಮಗೆ ಅವಶ್ಯಕವಾಗಿದೆ. ದೇವರು ಸ್ವತಃ ಒಂದು ಶುದ್ಧೀಕರಿಸುವ ಬೆಂಕಿಯಾಗಿದ್ದಾನೆ. ಆತನ ಪ್ರಸನ್ನತೆಯಲ್ಲಿ ನೆಲೆಗೊಂಡಿರುವುದು ನಾವು ಶುದ್ಧೀಕರಣಗೊಳ್ಳುವುದಕ್ಕೆ ಕಾರಣವಾಗಿರುತ್ತದೆ.

## ಬೆಂಕಿಯು ದೇವರ ವಾಕ್ಯವಾಗಿದೆ

''ನನ್ನ ವಾಕ್ಯವೂ ಬೆಂಕಿಗೂ?'' ಯೆರೆಮಿಾಯ 23:24ರಲ್ಲಿ ದೇವರು ಪ್ರಶ್ನಿಸುತ್ತಾನೆ. ದೇವರ ವಾಕ್ಯವು ಸುಡುವ ಮತ್ತು ನಾಶಪಡಿಸುವ ಬೆಂಕಿಯ ರೀತಿಯಲ್ಲಿದೆ. ದೇವರ ವಾಕ್ಯ ನಮ್ಮ ಹೃದಯಗಳನ್ನು ಶುದ್ಧೀಕರಿಸುತ್ತದೆ ಮತ್ತು ಪರೀಕ್ಷಿಸುತ್ತದೆ. ಇದು ''ದೇವರ ವಾಕ್ಯವು ಸಜೀವವಾದದ್ದು ಕಾರ್ಯ ಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನು ಕೀಲು ಮಚ್ಚೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿ ಹೋಗುವಂಥದು ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನು ವಿವೇಚಿಸುವಂಥದು ಆಗಿದೆ'' (ಇಬ್ರಿಯರಿಗೆ 4:12). ಹಳೇ ಒಡಂಬಡಿಕೆಯಲ್ಲಿ ಯೋಸೇಫನೆಂಬ ಹೆಸರುಳ್ಳ ವ್ಯಕ್ತಿಯ ಕುರಿತು ನಾವು ಓದುತ್ತೇವೆ. ದೇವರು ಅವನೊಂದಿಗೆ, ಕನಸ್ಸುಗಳ, ಮೂಲಕವಾಗಿ ಅವನು ಮುಂದೇ ಹೊಂದುವಂತಹ ಮಹಿಮೆಯನ್ನು ಅವನಿಗೆ ತೋರಿಸುವ ಮೂಲಕ ಮಾತಾನಾಡಿದನು. ಹಾಗಿದ್ದರೂ ಅವನು ಗುಲಾಮನಾಗಿ ಮಾರಲ್ಪಟ್ಟನು ಮತ್ತು ತುಂಬಾ ದೂರ ದೇಶಕ್ಕೆ ಕೊಂಡೊಯ್ಯಲ್ಪಟ್ಟನು. ಅವನು ತನ್ನ ಕುಟುಂಬದಿಂದ ದೂರವಾದನು. ಆ ದೂರದ ದೇಶದಲ್ಲಿ ತಪ್ಪು ಮಾಡದಿದ್ದರೂ ಸೆರೆಮನೆಯಲ್ಲಿ ಅವನು ಹಾಕಲ್ಪಟ್ಟನು. ''ಆತನು (ದೇವರು) ಅವರ ಮುಂದಾಗಿ (ಇಸ್ರಾಯೇಲ್ ಜನರು) ಒಬ್ಬನನ್ನು ಕಳುಹಿಸಿದನು ಯೋಸೇಫ ದಾಸತ್ವಕ್ಕೆ ಮಾರಲ್ಪಟ್ಟ ಯೋಸೇಫನೇ ಅವನು, ಅವನ ಕಾಲುಗಳು ಕೊಳದಲ್ಲಿ ನೊಂದವು ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು. ಅವನು

ತನ್ನ ಮಾತು ನೆರವೇರುವ ತನಕ ಯೆಹೋವನ ವಾಕ್ಯದಿಂದ ಶೋಧಿತನಾದನು.'' (ಕೀರ್ತನೆಗಳು 105:17:19) ಯೋಸೇಫನು ಏಕೆ ಹಾದು ಹೋದನು ಅವನು ಏನನ್ನು ಹಾದುಹೋದನು? ಒಂದು ಕಾರಣವು ಇಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ. ದೇವರ ವಾಕ್ಯವು ಯೋಸೇಫನನ್ನು ಪರೀಕ್ಷಿಸಿತು ಮತ್ತು ಶೋಧಿಸಿತು. ದೇವರ ವಾಕ್ಯವು ಬೆಂಕಿಯಂತಿದೆ. ಇದು ಪರೀಕ್ಷಿಸುತ್ತದೆ ಮತ್ತು ಶುದ್ಧೀಕರಿಸುತ್ತದೆ. ನಮ್ಮ ಹೃದಯಗಳಿಗೆ ದೇವರು ಮಾತಾನಾಡುವಾಗ ಮತ್ತು ಆತನ ವಾಕ್ಯಗಳನ್ನು ನಮ್ಮಲ್ಲಿ ಇರಿಸುವಾಗ, ಅವು ಕಾರ್ಯರೂಪಕ್ಕೆ ಬರುವ ಮೊದಲು ನಮ್ಮನ್ನು ಪರೀಕ್ಷಿಸುವ ಮತ್ತು ಶುದ್ಧೀಕರಿಸುವ ಕಾರ್ಯವನ್ನು ಮಾಡುತ್ತವೆ.

## ಬೆಂಕಿಯು, ಕಷ್ಟದ ಪರಿಸ್ಥಿತಿಗಳು, ಯಾತನೆಗಳು ಮತ್ತು ಶೋಧನೆಗಳಾಗಿದೆ

ಆತನ ಜನರ ಹೃದಯಗಳನ್ನು ಪರೀಕ್ಷಿಸಲು ದೇವರು ಉಪಯೋಗಿಸಿದ ಸಂದಿಗ್ಧ ಪರಿಸ್ಥಿತಿಗಳು ಮತ್ತು ಸನ್ನಿವೇಶಗಳ ಅಸಂಖ್ಯಾತ ಸಂದರ್ಭಗಳನ್ನು ನಾವು ನೋಡುತ್ತೇವೆ. ಇವುಗಳಲ್ಲಿ ಕೆಲವು ಪರಿಸ್ಥಿತಿಗಳು ಆತನ ಜನರಿಂದ ದೇವರು ಅಪೇಕ್ಷಿಸುವ ವಿಧೇಯತೆಯ ಸಾಮಾನ್ಯ ಕಾರ್ಯವಾಗಿದೆ. ಇತರ ಅಸಾಮಾನ್ಯ ಪರಿಸ್ಥಿತಿಗಳಲ್ಲಿ ಆತನ ಜನರು ಅದರೊಳಗೆ ತಮ್ಮನ್ನು ಇರಿಸಿಕೊಂಡರು ಮತ್ತು ಅವರು ಏನು ಮಾಡುತ್ತಾರೆ ಎಂಬುದನ್ನು ನೋಡಲೂ ದೇವರು ''ಹಿಂದೇ ನಿಂತುಕೊಂಡಿದ್ದನು'' ಮತ್ತು ಇನ್ನೂ ಕೆಲವು ಉರಿಯುವ ಉಪದ್ರವಗಳು ಮತ್ತು ದೇವರ ಜನರು ಪರೀಕ್ಷಿಸಲ್ಪಟ್ಟಂತಹ ಮತ್ತು ಶೋಧಿಸಲ್ಪಟ್ಟಂತಹ ಹಿಂಸೆಯ ಒಂದು ಕುಲುಮೆಯಾಗಿದೆ.

ಅಬ್ರಹಾಮನಿಂದ ವಿಧೇಯತೆಯ ಕಾರ್ಯವನ್ನು ಪಡೆಯಲು ದೇವರು ಪರೀಕ್ಷಿಸಿದನು. ''ಈ ಸಂಗತಿಗಳು ಆದ ಮೇಲೆ ದೇವರು ಅಬ್ರಹಾಮನನ್ನು ಪರಿಶೋಧಿಸಿದನು ಹೇಗೆಂದರೆ ಆತನು ಅವನನ್ನು - ಅಬ್ರಹಾಮನೇ ಎಂದು ಕರೆಯಲು ಅವನು–ಇಗೋ ಇದ್ದೇನೆ ಅಂದನು ಆಗಲಾತನು ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು ಮೊರೀಯ ದೇಶಕ್ಕೆ ಹೋಗಿ ಅಲ್ಲಿ ಅವನನ್ನು ನಾನು ಹೇಳುವ ಒಂದು ಬೆಟ್ಟದ ಮೇಲೆ ಸರ್ವಾಂಗ ಹೋಮವಾಗಿ ಅರ್ಪಿಸಬೇಕು ಅಂದನು'' (ಆದಿಕಾಂಡ 22:1,2)

''ಆ ದೂತನು ಅವನಿಗೆ–ನಿನ್ನ ಹುಡುಗನ ಮೇಲೆ ಕೈ ಹಾಕಬೇಡ ಅವನಿಗೆ ಏನೂ ಮಾಡಬೇಡ ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಪಿಸುವುದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬುದು

ಈಗ ತೋರಬಂತು ಎಂದು ಹೇಳಿದನು'' (ಆದಿಕಾಂಡ 22:12) ಅಬ್ರಹಾಮನು ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣನಾದನು!

ಐಗುಪ್ತ, ದೇವರ ಜನರ ಗುಲಾಮಗಿರಿಯ ನೆಲದ ಕಬ್ಬಿಣದ ಕುಲುಮೆಯಾಗಿತ್ತು. ''ನಿಮ್ಮನ್ನಾದರೋ ಯೆಹೋವನು ತನಗೆ ಸ್ವಕೀಯ ಜನರನ್ನಾಗಿ ಮಾಡಿಕೊಳ್ಳಬೇಕೆಂದು ಸಂಕಲ್ಪಿಸಿ ಕಬ್ಬಿಣವನ್ನು ಕರಗಿಸುವ ಕುಲುಮೆಯೋ ಪಾದಿಯಲ್ಲಿದ್ದ ಐಗುಪ್ತ ದೇಶದಿಂದ ತಪ್ಪಿಸಿದನು ಆ ಸಂಕಲ್ಪವು ಈಗ ನೆರವೇರಿತಲ್ಲಾ'' (ಧರ್ಮೋಪದೇಶಕಾಂಡ 4:20).

ಮರುಭೂಮಿ, ನಾವು ಹಿಂದೆಯೇ ನೋಡಿದಂತೆ, ಆತನ ಜನರ ಹೃದಯಗಳನ್ನು ದೇವರು ಪರೀಕ್ಷಿಸಿದ ಒಂದು ಸ್ಥಳವಾಗಿದೆ. ''ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಈ ನಾಲ್ವತ್ತು ವರುಷ ಅರಣ್ಯದಲ್ಲಿ ನಡಿಸಿದ್ದನ್ನು ನೀವು ತನ್ನ ಆಜ್ಞೆಗಳನ್ನು ಕೈಕೊಳ್ಳುವವರೋ ಅಲ್ಲವೋ ಎಂದು ತಿಳಿದುಕೊಳ್ಳುವುದಕ್ಕೆ ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ನಿಮ್ಮ ಮನೋಭಾವವನ್ನು ಪರೀಕ್ಷಿಸಿದ್ದನ್ನೂ ನೆನಪಿಗೆ ತಂದುಕೊಳ್ಳಿರಿ. ಮನುಷ್ಯರು ಆಹಾರ ಮಾತ್ರದಿಂದಲ್ಲ ಯೆಹೋವನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾರೆಂಬುದು ನಿಮಗೆ ತಿಳಿಯುವಂತೆ ಆತನು ನಿಮ್ಮನ್ನು ಕಷ್ಟಕ್ಕೆ ಒಳಪಡಿಸಿ ಹಸಿವೆಯಿಂದ ಬಳಲಿಸಿ ನಿಮಗೂ ನಿಮ್ಮ ಪೂರ್ವಿಕರಿಗೂ ಗೊತ್ತಿಲ್ಲದ ಮನ್ನವನ್ನು ಕೊಟ್ಟು ಪೋಷಿಸಿದನು'' (ಧರ್ಮೋಪದೇಶಕಾಂಡ 8:2,3)

ಆತನ ಜನರು ಆತನು ಒದಗಿಸಿದ ಮನ್ನವನ್ನು ಸಂಗ್ರಹಿಸುವುದರು ಕುರಿತು ಆತನು ಸೂಚನೆಗಳನ್ನು ಅವರಿಗೆ ಕೊಡುವಾಗ ದೇವರು ಪರೀಕ್ಷಿಸಿದನು. ''ಆಗ ಯೆಹೋವನು ಮೋಶೆಗೆ ಇಗೋ ನಾನು ಆಕಾಶದಿಂದ ನಿಮಗೋಸ್ಕರ ಆಹಾರವನ್ನು ಸುರಿಸುವೆನು. ಈ ಜನರು ಪ್ರತಿದಿನವೂ ಹೊರಗೆ ಹೋಗಿ ಆಯಾ ದಿನಕ್ಕೆ ಬೇಕಾದಷ್ಟು ಮಾತ್ರ ಕೂಡಿಸಿಕೊಳ್ಳಬೇಕು. ಇದರಿಂದ ಇವರು ನನ್ನ ಬೋಧನೆಯನ್ನು ಅನುಸರಿಸಿ ನಡೆಯುವವರೋ ಅಲ್ಲವೋ ಎಂದು ಪರೀಕ್ಷಿಸಿ ತಿಳಿಯುತ್ತೇನೆ.'' (ವಿಮೋಚನಕಾಂಡ 16:4).

ಕೆಲವು ಸಮಯಗಳಲ್ಲಿ ಸುಳ್ಳು ಪ್ರವಾದಿಗಳ ನುಡಿಗಳು ಕಾರ್ಯರೂಪಕ್ಕೆ ಬರಲು ದೇವರು ಅನುಮತಿಸಿದನು. ಆದ್ದರಿಂದ ಆತನ ಜನರನ್ನು ಆತನು ಪರೀಕ್ಷಿಸಬಹುದಾಗಿತ್ತು. ''ಯಾವ ಪ್ರವಾದಿಯಾಗಲಿ ಕನಸುಕಂಡವನಾಗಲಿ ನಿಮ್ಮ ಮಧ್ಯದಲ್ಲಿ ಬಂದು ನಿಮಗೆ ಗೊತ್ತಿಲ್ಲದ ಇತರ ದೇವರುಗಳನ್ನು ಸೂಚನೆ ಮಾಡಿ – ಈ ದೇವತೆಗಳನ್ನು ಅವಲಂಬಿಸಿ ಸೇವಿಸೋಣ ಎಂದು ಬೋಧಿಸುತ್ತಾ ಆ

ಬೋಧನೆಯನ್ನು ಸ್ಥಾಪಿಸುವುದಕ್ಕೆ ಒಂದು ಅದ್ಭುತವನ್ನಾಗಲಿ ಮಹತ್ಕಾರ್ಯವನ್ನಾಗಲಿ ತೋರಿಸಿಕೊಡುತ್ತೇನೆಂದು ಹೇಳಲು ಅವನು ಹೇಳಿದಂತೆಯೇ ನಡೆದರೂ ನೀವು ಅವನ ಮಾತಿಗೆ ಕಿವಿಗೊಡಬಾರದು. ನಿಮ್ಮ ದೇವರಾದ ಯೆಹೋವನು ಇವರು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ತನ್ನನ್ನೇ ಪ್ರೀತಿಸುವವರು ಹೌದೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಿಮ್ಮನ್ನು ಪರೀಕ್ಷಿಸುತ್ತಾನೆ'' (ಧರ್ಮೋಪದೇಶಕಾಂಡ 13:1–3)

ಇಸ್ರಾಯೇಲ್ಯರಿಗೆ ವಿರುದ್ಧವಾಗಿ ವೈರಿಗಳನ್ನು ದೇವರು ಅನುಮತಿಸಿದನು ಆದ್ದರಿಂದ ಅವರನ್ನು ಆನಂತರ ಆತನ ಜನರನ್ನು ಪರೀಕ್ಷಿಸಲು ಆತನು ಉಪಯೋಗಿಸಬಹುದಿತ್ತು ''ಆದದರಿಂದ ಯೆಹೋವನ ಕೋಪವು ಇಸ್ರಾಯೇಲ್ಯರ ಮೇಲೆ ಉರಿಯಹತ್ತಿತ್ತು. ಆತನು ಈ ಜನರ ಪಿತೃಗಳಿಗೆ ನಾನು ಕೊಟ್ಟ ನಿಬಂಧನೆಯನ್ನು ಇವರು ಕೈಕೊಳ್ಳಲಿಲ್ಲ. ನನ್ನ ಮಾತಿಗೆ ಕಿವಿಗೊಡಲಿಲ್ಲ. ಹೀಗಿರುವುದರಿಂದ ಯೆಹೋಶುವನು ಸಾಯುವ ಮೊದಲು ಹೊರಡಿಸದೆ ಬಿಟ್ಟ ಜನಾಂಗಗಳಲ್ಲಿ ನಾನೂ ಒಂದನ್ನಾದರೂ ಹೊರಡಿಸುವುದಿಲ್ಲ ಇವರೂ ತಮ್ಮ ಹಿರಿಯರಂತೆ ಜಾಗರೂಕತೆಯಿಂದ ಯೆಹೋವನಾದ ನನ್ನ ಮಾರ್ಗದಲ್ಲಿ ನಡೆಯುವರೋ ಇಲ್ಲವೋ ಎಂದು ಈ ಜನಾಂಗಗಳ ಮೂಲಕವಾಗಿ ಪರೀಕ್ಷಿಸುವೆನು ಅಂದನು ಇದರಿಂದ ಯೆಹೋವನು ಯೆಹೋಶುವನ ಕೈಗೆ ಒಪ್ಪಿಸದೆ ಉಳಿಸಿದ್ದ ಜನಾಂಗಗಳನ್ನು ಬೇಗನೆ ಅಟ್ಟಿಬಿಡಲಿಲ್ಲ (ನ್ಯಾಯಸ್ಥಾಪಕರು 2:20–23)

ಅರಸನಾದ ಹೀಜ್ಕೀಯನು, ಬ್ಯಾಬಿಲೋನಿಯಾದ ರಾಯಭಾರಿಗಳೊಡನೆ ಇದ್ದಂತಹ ಪರಿಸ್ಥಿತಿಯಲ್ಲಿ ಅವನನ್ನು ಪರೀಕ್ಷಿಸುವ ಕ್ರಮದಲ್ಲಿ ದೇವರು ಹಿಂದಕ್ಕೆ ಸರಿದಂತಹ ಪರಿಸ್ಥಿತಿಯಲ್ಲಿ ಗುರ್ತಿಸಿಕೊಂಡನು. ''ಆದದರಿಂದ ಅವನ ದೇಶದಲ್ಲುಂಟಾದ ಅದ್ಭುತದ ವಿಷಯವನ್ನು ವಿಚಾರಿಸುವುದಕ್ಕಾಗಿ ಬಾಬೆಲಿನ ಪ್ರಭುಗಳ ರಾಯಭಾರಿಗಳು ಅವನ ಬಳಿಗೆ ಬಂದಾಗ ದೇವರು ಅವನನ್ನು ಪರೀಕ್ಷಿಸುವುದಕ್ಕೂ ಅವನ ಸರ್ವಾಂತರ್ಯವನ್ನು ತಿಳುಕೊಳ್ಳುವುದಕ್ಕೂ ಅವನನ್ನು ಕೈಬಿಟ್ಟನು.'' (2 ಪೂರ್ವಕಾಲ ವೃತ್ತಾಂತ 32:31)

ದೇವರು ಆತನ ಜನರಿಗೆ ''ಸಂಕಟವೆಂಬ ಪುಟಕ್ಕೆ ಹಾಕಿ ನಿನ್ನನ್ನು ಪರೀಕ್ಷಿಸಿದ್ದೇನೆ'' (ಯೆಶಾಯ 48:10ಆ) ಎಂಬುದಾಗಿ ಹೇಳುತ್ತಾನೆ. ಸಂಕಟಗಳು (ರೋಗಗಳು ಅಥವಾ ವ್ಯಾಧಿಗಳಲ್ಲ) ಕಠಿಣತೆ ಮತ್ತು ಉಪದ್ರವಗಳು ನಾವು ಪರೀಕ್ಷಿಸಲ್ಪಡುವ, ಶೋಧಿಸಲ್ಪಟ್ಟ ಮತ್ತು ಶುದ್ಧೀಕರಣಗೊಂಡಂತಂಹ ಒಂದು ಕುಲುಮೆಯಾಗಿದೆ.

''ನೀವು ಸದ್ಯಕ್ಕೆ ಸ್ವಲ್ಪಕಾಲ ದೇವರ ಚಿತ್ತಾನುಸಾರ ನಾನಾ ಕಷ್ಟಗಳಲ್ಲಿದ್ದು ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ ಹರ್ಷಿಸುವವರಾಗಿದ್ದೀರಿ ಬಂಗಾರವು ನಾಶವಾಗುವಂಥದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಹಾಕಿ ಶೋಧಿಸುವದುಂಟಷ್ಟೆ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟು ಮಾಡುವದು.'' (1 ಪೇತ್ರನು 1:6,7)

## 5

# ಪ್ರತಿಯೊಬ್ಬರು ಬೆಂಕಿಯೊಡನೆ ಉಪ್ಪಿನ ಹದ ಹೊಂದಿದ್ದಾರೆ

ಮಾರ್ಕ 9:49, 50

''ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು. ಉಪ್ಪು ಒಳ್ಳೆಯ ಪದಾರ್ಥವೇ; ಉಪ್ಪು ಸಪ್ಪೆಯಾದರೆ ಅದನ್ನು ಇನ್ನಾವುದರಿಂದ ರುಚಿಗೊಳಿಸುವಿರಿ? ನಿಮ್ಮೊಳಗೆ ಉಪ್ಪು ಇರಲಿ ಒಬ್ಬರಿಗೊಬ್ಬರು ಸಮಾಧಾನದಿಂದಿರಿ.''

ಬೆಂಕಿಯು ಪರಿಮಳ, ಪ್ರಗತಿ ಮತ್ತು ಪ್ರೌಢತೆಯನ್ನು ಉತ್ಪಾದಿಸುತ್ತದೆ. ಮಸಾಲೆ (ಉಪ್ಪಿನ ಹದದ ಪ್ರಕ್ರಿಯೆ) ಸಂರಕ್ಷಕಗಳಂತೆ ಕಾರ್ಯ ಮಾಡುತ್ತದೆ. ಪ್ರತಿಯೊಬ್ಬರು ಬೆಂಕಿಯೆಂಬ ಉಪ್ಪಿನ ಹದವನ್ನು ಕೊಡಲ್ಪಟ್ಟವರಾಗಿರುತ್ತಾರೆ ಎಂಬುದಾಗಿ ಯೇಸುವು ಹೇಳಿದ್ದನ್ನು ಗಮನಿಸಿರಿ ಉಪ್ಪಿನ ಹದ ಕೊಡುವ ಅಥವಾ ಬೆಂಕಿಯಿಂದ ಮಸಾಲೆ ಭರಿತ ಪ್ರಕ್ರಿಯೆಯಿಂದ ಯಾರೂ ಸಹ ತಪ್ಪಿಸಿಕೊಳ್ಳಲಾಗುವುದಿಲ್ಲ. ಅನೇಕ ಕ್ರೈಸ್ತರ ಜೀವಿತಗಳಲ್ಲಿ ದೇವರು ಉಪ್ಪಿನ ಹದದ ಪ್ರಕ್ರಿಯೆಯನ್ನು ದೇವರು ಪ್ರಾರಂಭಿಸುವಾಗ ಅವರು ಈ ಕಾರ್ಯದಲ್ಲಿ ದೇವರಿಗೆ ಆಕ್ಷೇಪಾರ್ಯ ಮಾಡುವವರಾಗಿ ಅಜ್ಞಾನಿಗಳಂತೆ ಆಗುತ್ತಾರೆ. ಒಬ್ಬನು ದೇವರೊಂದಿಗೆ ಮುಂದುವರೆಯಲು ಅಪೇಕ್ಷಿಸಿದರೆ ಉಪ್ಪಿನ ಹದದ ಪ್ರಕ್ರಿಯೆಯನ್ನು ಯಾವುದು ಪ್ರತಿರೋಧಿಸಲು ಮತ್ತು ಬದಲಿಯಾಗಿಸಲು ಸಾಧ್ಯವಿಲ್ಲ. ದೇವರು ಅಪೇಕ್ಷಿಸುವ ಒಂದು ಸಂಗತಿಯೆಂದರೆ ಅದು ಸಮರ್ಪಣೆ ಮತ್ತು ಆತನ ಕೈಗಳಿಗೆ ಮಣಿಯುವವರಾಗಿಬೇಕು. ಬೆಂಕಿಯ ಹದಗೊಳಿಸುವ ಕಾರ್ಯದಿಂದ ಓಡಿ ಹೋಗುವಾಗ ನಾವು ಉಪ್ಪಿನ ರುಚಿಯನ್ನು ನಮ್ಮಲ್ಲಿ ಕಳೆದುಕೊಳ್ಳುತ್ತೇವೆ. ನಾವು ರುಚಿಯಿಲ್ಲದ ಜನರಾಗುತ್ತೇವೆ. ನಮ್ಮ ಸುತ್ತಲಿನ ಪ್ರಪಂಚಕ್ಕೆ ಪ್ರಭಾವ ಬೀರಲು ಸಾಧ್ಯವಾಗುವುದಿಲ್ಲ.

ಯೇಸುವಿನ ಉದಾಹರಣೆಯನ್ನು ನೋಡಿರಿ. ಯೇಸುವಿನ ಪ್ರವಾದನೆಯ ಕುರಿತು ಮಾತಾನಾಡುವಾಗ ''ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ–ಇಗೋ ಪರೀಕ್ಷಿತವಾಗಿಯೂ ಮಾನ್ಯವಾಗಿಯೂ ಇರುವ ಮೂಲೆಗಲ್ಲನ್ನು ಚೀಯೋನಿನಲ್ಲಿ ಸ್ಥಿರವಾದ ಅಸ್ತಿವಾರವನ್ನಾಗಿ ಇಡುತ್ತೇನೆ; ಭರವಸವಿಡುವವನು ಆತುರಪಡನು'' (ಯೆಶಾಯ 28:16 1 ಪೇತ್ರನು 2:6) ಎಂಬುದಾಗಿ ದೇವರ ವಾಕ್ಯವು ಹೇಳುತ್ತದೆ.

ಯೇಸುವು ಹೇಗೆ ಪರೀಕ್ಷಿತನಾದನು? ಆತನ ಜೀವಿತದಲ್ಲಿ ಯಾವ ಉದ್ಧೇಶಕ್ಕಾಗಿ ಇದು ಸೇವೆ ಮಾಡಿತ್ತು? ''ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹುಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾ ಕರ್ತನನ್ನು ಬಾಧೆಗಳ ಮೂಲಕ ಸಿದ್ಧಿಗೆ ತರುವದು ಆತನಿಗೆ ಯುಕ್ತವಾಗಿತ್ತು (ಇಬ್ರಿಯರಿಗೆ 2:10) ಮತ್ತೊಮ್ಮೆ, ಇಬ್ರಿಯರಿಗೆ 5:8,9ರಲ್ಲಿನಾವು ಹೀಗೆ ಓದುತ್ತೇವೆ. ''ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು.'' ಯೇಸುವು ಸಹ 'ಬೆಂಕಿಯಿಂದ ಉಪ್ಪಿನ ಹದವನ್ನು'' ದಾಟಿ ಹೋಗಬೇಕಾಯಿತು. ಯೇಸುವು ಸಹ ಬಂಧಗಳನ್ನು ತಾಳಿಕೊಳ್ಳಬೇಕಾಯಿತು ಮತ್ತು ಇದರ ಮೂಲಕವಾಗಿ ಆತನು ವಿಧೇಯತೆಯನ್ನು ಕಲಿತುಕೊಂಡನು ಮತ್ತು ಸ್ವತಃ ತನ್ನನ್ನು ನಮ್ಮ ರಕ್ಷಣೆಯ ಕರ್ತೃವಾಗಿರಲೂ ಅರ್ಹನಾದನು, ಆತನು ಪರಿಪೂರ್ಣವಾದನು-ಸಂಪೂರ್ಣವಾಗಿ ಮಾಡಲ್ಪಟ್ಟನು-ಆತನು ಅನುಭವಿಸಿದ ಬಾಧೆಗಳಿಂದ ಪ್ರೌಢತೆಗೆ ತರಲ್ಪಟ್ಟನು.

# 6

# ಬೆಂಕಿಯ ಮೂಲಕವಾಗಿ ನಾವು ನಡೆಯುವಾಗ

ಯೋಬನು 23:10-12

**''ಆತನಾದರೋ ನನ್ನ ದಾರಿಯನ್ನು ಬಲ್ಲನು ಆತನೇ ನನ್ನನ್ನು ಶೋಧಿಸಿ ನೋಡಿದರೆ ಚೊಕ್ಕ ಬಂಗಾರವಾಗಿ ಕಾಣಿಸುವೆನು ಆತನ ಹೆಜ್ಜೆಯ ಜಾಡಿನಲ್ಲೇ ಕಾಲಿಟ್ಟಿದ್ದೇನೆ. ಓರೆಯಾಗದೆ ಆತನ ದಾರಿಯನ್ನೇ ಹಿಡಿದಿದ್ದೇನೆ, ಆತನ ತುಟಿಗಳಿಂದ ಹೊರಟ ನಿಯಮಗಳಿಗೆ ನಾನು ಹಿಂದೆಗೆಯಲಿಲ್ಲ ಆತನ ಬಾಯಿಂದ ಬಂದ ಮಾತುಗಳನ್ನು ಎದೆಯಲ್ಲಿ ನಿಧಿಯನ್ನಾಗಿ ಬಚ್ಚಿಟ್ಟುಕೊಂಡಿದ್ದೇನೆ.**

ಬಹುಶಃ ನಿಮ್ಮನ್ನು ಬೆಂಕಿಯ ಮಧ್ಯದಲ್ಲಿ ನೀವು ಗುರ್ತಿಸಿಕೊಂಡಿರಬಹುದು. ಬಹುಶಃ ದೇವರು ನಿಮ್ಮ ಜೀವಿತದಲ್ಲಿ ಉಪ್ಪಿನ ಹದದ ಪ್ರಕ್ರಿಯೆ ಪ್ರಾರಂಭಿಸಿದ್ದಾನೆ-ನೀವು ಬೆಂಕಿಯಿಂದ ಉಪ್ಪಿನ ಹದ ಹೊಂದಿದವರಾಗಿದ್ದೀರಾ ಅಥವಾ ಇದು ಇನ್ನೂ ಮುಂದೇ ಇರಬಹುದು ಮತ್ತು ನಿಮ್ಮ ಜೀವಿತದ ಆ ಒಂದು ಋತುವು ಇನ್ನೂ ಬರುವುದಾಗಿರಬಹುದು. ಶುದ್ಧೀಕರಿಸುವ ಬೆಂಕಿಯಲ್ಲಿ ದೇವರು ನಮ್ಮ ಶುದ್ಧೀಕರಣ ಮಾಡುವಂತಹ ನಮ್ಮ ಜೀವಿತದ ಋತುಗಳು ಮತ್ತು ಸಮಯಗಳಲ್ಲಿ ನಾವು ಏನು ಮಾಡಬೇಕು?

ಯೋಬನ ಉದಾಹರಣೆ ಇದೆ. ಯೋಬನ ತಪ್ಪು ಏನು ಎಂದು ಲೆಕ್ಕಿಸದೆ, ನಾವು ಅವನನ್ನು ಮೆಚ್ಚಬೇಕು ಮತ್ತು ಅವನ ಜೀವಿತದಿಂದ ಕಲಿಯಬೇಕು. ಬಾಧೆಗಳನ್ನು ಮತ್ತು ಕೇಡುಗಾಲವನ್ನು ಹಾದುಹೋದಂತಹವರು ಮತ್ತು ವಿಜಯಿಯಾಗಿ ಹೊರ ಬಂದಂತಹವರು ನಮಗೆ ಕೆಲವು ಮೌಲ್ಯವುಳ್ಳ ಪಾಠಗಳನ್ನು ಕಲಿಸಬಹುದು. ಯೋಬನು ಹಾದು ಹೋಗುತ್ತಿದ್ದಂತಹದ್ದು ದೇವರಿಗೆ ಗೊತ್ತು ಎಂಬುದಾಗಿ ಯೋಬನು ಘೋಷಿಸಿದನು ಮತ್ತು ಎಲ್ಲವೂ ಮುಗಿದು ಹೋದಾಗ ಅವನು ಚಿನ್ನದಂತೆ ಹೊರ ಬರುತ್ತೇನೆಂಬುದು ಗೊತ್ತಿತ್ತು. ದೇವರು ನಮ್ಮನ್ನು ನಡೆಸುವಂತಹ ದೃಷ್ಟಿಕೋನ ಮತ್ತು ಅಂತಹ ತಿಳುವಳಿಕೆಯನ್ನು ನಾವುಗಳು ಬೆಳೆಸಿಕೊಳ್ಳಬೇಕು. ಅಂತಹ ಸಮಯಗಳಲ್ಲಿ ದೇವರ ವಾಕ್ಯ ನಾವು ಹಿಡಿದವರಾಗಿರಬೇಕು ಮತ್ತು ಪಕ್ಕಕ್ಕೆ ಹೋಗಬಾರದು.

ಯೋಬನ ಮತ್ತೊಂದು ಪ್ರಾಮುಖ್ಯವಾದ ಅಂಶವೇನೆಂದರೆ ಅವನ ತಾಳ್ಮೆ. ''ನೀವು ಯೋಬನಲ್ಲಿದ್ದ ತಾಳ್ಮೆಯ ವಿಷಯವಾಗಿ ಕೇಳಿ ಕರ್ತನು ಅವನಿಗೆ ಅಂತ್ಯದಲ್ಲಿ ಮಾಡಿದ್ದನ್ನು ನೋಡಿ ಕರ್ತನು ಕರುಣಾಸಾಗರನೂ ದಯಾಳುವೂ ಆಗಿದ್ದಾನೆಂದು ತಿಳಿದಿದ್ದೀರಷ್ಟೆ'' (ಯಾಕೋಬನು 5:11ಬಿ) ಎಂದು ನಮಗೆ ಹೇಳಲ್ಪಟ್ಟಿದೆ. ನಿಮ್ಮ ನಂಬಿಕೆಯ ಪರೀಕ್ಷೆಯು ತಾಳ್ಮೆಯನ್ನು ಉತ್ಪಾದಿಸುತ್ತದೆ ಮತ್ತು ಪರಿಣಾಮವಾಗಿ ತಾಳ್ಮೆಯು ತನ್ನ ಪೂರ್ಣಾವಧಿಯನ್ನು ದಾಟಿ ಹೋಗಲೂ ಅವಕಾಶ ನೀಡಿದರೆ ನಾವು ಯಾವುದೇ ಕೊರತೆಯಿಲ್ಲದೆ ಪರಿಪೂರ್ಣ ಮತ್ತು ಸಂಪೂರ್ಣರಾಗುತ್ತೇವೆ. ''ನನ್ನ ಸಹೋದರರರೇ ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯು ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ. ಆ ತಾಳ್ಮೆಯು ಸಿದ್ಧಿಗೆ ಬರಲಿ ಆಗ ನೀವು ಶಿಕ್ಷಿತರೂ ಸರ್ವ ಸುಗುಣವುಳ್ಳವರೂ ಏನು ಕಡಿಮೆಯಿಲ್ಲದವರು ಆಗಿರುವಿರಿ (ಯಾಕೋಬನು 1:2-4) ನಾವು ತಾಳ್ಮೆಯಿಂದ ಇರುವಾಗ ದೇವರು ನಮ್ಮಲ್ಲಿ ಕಾರ್ಯ ಮಾಡಲೂ ಮತ್ತು ಆತನ ಒಳ್ಳೆಯ ಉದ್ದೇಶಗಳನ್ನು ನೆರವೇರಿಸಲು ಅವಕಾಶ ನೀಡುತ್ತೇವೆ. ನಾವು ಅನೇಕ ಉಪದ್ರವಗಳ ಮಧ್ಯದಲ್ಲಿ ಬಿದ್ದಾಗಲೂ ಅದನ್ನು ಆನಂದಕರವಾದ್ದೆಂದು ಎಣಿಸುತ್ತೇವೆ.

ಆತನ ಶ್ರಮೆಯ ಮೂಲಕವಾಗಿ ಕಲಿತ ಯೇಸುವಿನ ಉದಾಹರಣೆ ಇದೆ. ಅಂತಹ ಜೀವನದ ಸಮಯಗಳಲ್ಲಿ ದೇವರು ನಮ್ಮ ಹೃದಯಗಳಿಗೆ ಅನೇಕ ಪ್ರಾಮುಖ್ಯವಾದ ವಿಷಯಗಳನ್ನು ಮಾತಾಡುತ್ತಾನೆ. ಬೆಂಕಿಯಲ್ಲಿ ನಾವು ಹಾದು ಹೋಗುವಾಗ ಅದು ಸುಡುವುದಿಲ್ಲ. ಜ್ವಾಲೆಯು ದಹಿಸುವುದಿಲ್ಲ ಎಂಬಂತಹ ವಾಗ್ದಾನವನ್ನು ನಾವು ಹೊಂದಿದ್ದೇವೆ. ''ನೀನು ಜಲರಾಶಿಯನ್ನು ಹಾದು ಹೋಗುವಾಗ ನಾನು ನಿನ್ನ ಸಂಗಡ ಇರುವೆನು ನದಿಗಳನ್ನು ದಾಟುವಾಗ ಅವು ನಿನ್ನನ್ನು ಮುಳುಗಿಸವು; ಉರಿಯಲ್ಲಿ ನಡೆಯುವಾಗ ನೀನು ಕಂದದಿರುವಿ, ಜ್ವಾಲೆಯು ನಿನ್ನನ್ನು ದಹಿಸದು'' (ಯೆಶಾಯ 43:2) ಎಲ್ಲಾದರ ಮೂಲಕವಾಗಿ ಆತನು ನಮ್ಮೊಂದಿಗೆ ಇದ್ದಾನೆ ಮತ್ತು ಆದುದರಿಂದ ಯಾವ ದುರಾತ್ಮನು ನಮ್ಮನ್ನು ಜಯಿಸಲು ಸಾಧ್ಯವಾಗುವುದಿಲ್ಲ.

# 7

# ಇದರೆಲ್ಲದರ ಮೌಲ್ಯ

ಜ್ಞಾನೋಕ್ತಿಗಳು 25:4
**''ಬೆಳ್ಳಿಯಿಂದ ಕಲ್ಮಷವನ್ನು ತೆಗೆದು ಹಾಕಿದರೆ ಅಕ್ಕಸಾಲಿಗನಿಗೆ ಬೇಕಾದ ಪಾತ್ರೆಯಾಗುವುದು''**

ದೇವ ಜನರು ಆತನ ರತ್ನಗಳಾಗಿದ್ದಾರೆ. ''ನಾನು ಕಾರ್ಯ ಸಾಧಿಸುವ ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು ಆ ದಿನದಲ್ಲಿ ಅವರನ್ನು ನನ್ನ ರತ್ನಗಳಾಗಿ ಮಾಡುತ್ತೇನೆ'' (ಮಲಾಕಿಯ 3:17) ಎಂಬುದಾಗಿ ಆತನ ಹೆಸರಿಗೆ ಭಯಪಡುವವರ ಕುರಿತು ದೇವರು ಹೇಳುತ್ತಾನೆ. ನಾವು ಆತನ ರತ್ನಗಳಾಗಿ ಆಕಾರ ಕೊಡುವ ಮೊದಲು ಅಶುದ್ಧತ್ವವು ತೆಗೆದು ಹಾಕಲ್ಪಡಬೇಕು. ಕೆಲವು ಬಾರಿ ಇದರ ಅರ್ಥ ಅನೇಕ ಸಮಯಗಳಲ್ಲಿ ಬೆಂಕಿಯನ್ನು ದಾಟಿ ಹೋಗಬೇಕು. ''ಅವು ಏಳು ಸಾರಿ ಪುಟಕ್ಕೆ ಹಾಕಿದ ಚೊಕ್ಕ ಬೆಳ್ಳಿಯೋಪಾದಿಯಲ್ಲಿವೆ'' (ಕೀರ್ತನೆಗಳು 12:6ಬಿ). ಆದರೆ ನಮ್ಮೊಳಗಿರುವ, ಆನಂದವೇನೆಂದರೆ ಒಂದು ದಿನ ನಾವು ಆತನ ರತ್ನಗಳಾಗಿ ಮಾಡಲ್ಪಡುತ್ತೇವೆ ಎಂಬುದು ನಮಗೆ ಗೊತ್ತಿದೆ! ಆತನ ಮಹಿಮೆ ಮತ್ತು ಸ್ತೋತ್ರಕ್ಕಾಗಿ ನಾವಿರುವವರಾಗುತ್ತೇವೆ. ಆತನು ನಮ್ಮ ವಿಷಯದಲ್ಲಿ ಹೆಮ್ಮೆಪಡುತ್ತಾನೆ ಮತ್ತು ನಮ್ಮನ್ನು ಹೆಮ್ಮೆಯಿಂದ 'ಧರಿಸಿಕೊಳ್ಳುತ್ತಾನೆ.'

ಅಪೊಸ್ತಲನಾದ ಪೌಲನು ಒತ್ತಿ ಹೇಳುವುದೇನೆಂದರೆ, ''ನೀನು ದೇವರ ದೃಷ್ಟಿಗೆ ಯೋಗ್ಯವಾಗಿ ಕಾಣಿಸಿಕೊಳ್ಳುವುದಕ್ಕೆ ಪ್ರಯಾಸ ಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು.'' (2 ತಿಮೊಥೆಯನಿಗೆ 2:15) ಬಾಧೆಗಳಿಂದ ಪರೀಕ್ಷಿಸಲ್ಪಟ್ಟವರು, ಕೊನೆ ಘಳಿಗೆಯ ಸುಗ್ಗಿಯನ್ನು ಸಂಗ್ರಹಿಸಲು ಯಜಮಾನನ ಉಪಯೋಗಕ್ಕೆ ಬರಲೂ ಸಿದ್ಧವಾದ, ದೇವರಿಗಾಗಿ ಅನುಮೋದಿಸಲ್ಪಟ್ಟ ಕೆಲಸಗಾರರಾಗಿ ನಿಂತುಕೊಳ್ಳುತ್ತಾರೆ. ಆತನ ಜನರನ್ನು ಶುದ್ಧೀಕರಿಸುವವನು ಮತ್ತು ಶುದ್ಧೀಕರಣಗಾರನಾಗಿ ಕುಳಿತಿರುವಾತನನ್ನು ಪ್ರೀತಿಸುವುದನ್ನು ನಾವು ಕಲಿಯಬೇಕು.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು (ಮೈಕ್ರೋಸಾಫ್ಟ್ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ಧೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www. apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

"**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**" (ಅಪೊಸ್ತಲರ ಕೃತ್ಯ 10:43)

"**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**" (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಟಿಪ್ಪಣಿಗಳು

## DOWNLOAD THE FREE APP!

*Search for*

"All Peoples Church Bangalore"
in the App or Google play stores.




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಸತ್ಯವೇದ ಶಾಲೆ
ಮತ್ತು ಸೇವಾ ತರಬೇತಿ ಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ಕೃಷ್ಟತೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಂದಿಗೆ ಪವಿತ್ರಾತ್ಮನ ಅತ್ಯದ್ಭುತವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣವುಳ್ಳ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ, ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೊಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರಿಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ, ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಡುವಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿ.

APC-BC is accredited by the Nations Association for Theological Accreditation (NATA).

ಹೃದಯಗಳಲ್ಲಿ ದೇವರು ಯಾವ ಮಾರ್ಗಗಳಲ್ಲಿ ಕಾರ್ಯ ಮಾಡುತ್ತಾನೆಂಬುದನ್ನು ಮತ್ತು ಆತನಿಗೆ ತಮ್ಮನ್ನು ಕೊಡಲ್ಪಟ್ಟಂತವರಲ್ಲಿ ಜೀವಿಸುತ್ತಾನೆ ಎಂಬುದನ್ನು ಕಲಿಯುವಂತದ್ದು ಉತ್ಸಾಹಕರವಾಗಿದೆ. ದೇವರು ಕಾರ್ಯಗಳನ್ನು ಮತ್ತು ಆತನ ಜನರೊಡನೆ ವ್ಯವಹರಿಸುವ ವಿಧಾನಗಳು ಮತ್ತು ಮಾರ್ಗಗಳು ಕುರಿತು ಅಧಿಕವಾಗಿ ತಿಳಿದುಕೊಳ್ಳುವುದು. ಆತನೊಡನೆ ಹೆಜ್ಜೆಯನ್ನಿಟ್ಟು ನಡೆಯುವುದು ಮತ್ತು ಸಮರ್ಪಿಸುವುದು ಬಹಳ ಸುಲಭಕರವಾಗಿರುತ್ತದೆ. ಆತನು ಕಾರ್ಯ ಮಾಡುವ ವಿಧಾನಗಳಿಗೆ ನಾವು ಅಜ್ಞಾನಿಗಳಾಗಿ ನಾವು ಮೊಂಡುಗಳಾದರೆ ಮತ್ತು ನಮ್ಮ ಸ್ವಂತ ಮಾರ್ಗ ಹೊಂದಲು ಅಪೇಕ್ಷಿಸಿದರೆ, ಮಾತ್ರ ಇದು ಅನ್ವಯಿಸುತ್ತದೆ. ಆತನ ಜನರನ್ನು ಶುದ್ಧೀಕರಿಸುತ್ತಾನೆ ಮತ್ತು ಶುದ್ಧೀಕರಿಸುವವನಾಗಿ ನಮ್ಮ ದೇವರು ನಮಗೆ ಕೃಪೆಯನ್ನು ಕೊಡುತ್ತಾನೆ. ಕಲೆಗಳು ಅಥವಾ ಸುಕ್ಕುಗಳು ಇಲ್ಲದಂತಹ ಸಭೆಗಾಗಿ ಯೇಸುವು ಬರುತ್ತಾನೆ. ಇದು ಅಗತ್ಯಕರವಾಗಿ ಶುದ್ಧೀಕರಣದ ಪ್ರಕ್ರಿಯೆಯನ್ನು ಅಪೇಕ್ಷಿಸುತ್ತದೆ. ಈ ಪುಸ್ತಕವು ದೇವರ ಉದ್ದೇಶಗಳು ಮತ್ತು ಮಾರ್ಗಗಳ ಕುರಿತು ನಮ್ಮನ್ನು ಜ್ಞಾನವಂತರಾಗಿ ಮಾಡುತ್ತದೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org